ಕೆ.ಮಲ್ಲೇಶ, ಕೊಡಸೋಗೆ
ಎಲ್ಲರ ಪ್ರಶ್ನೆಗೂ ಉತ್ತರಿಸುವ ನಿಮಗೆ ಹುಚ್ಚು ಹಿಡಿಯುವುದಿಲ್ಲವೆ?



ಉತ್ತರಿಸುವ ಹುಚ್ಚು ಹಿಡಿದವರಿಗೆ ಮಾತ್ರ ಈ ಅಂಕಣದಲ್ಲಿ ಬರೆಯಲು ಅವಕಾಶವಂತೆ!

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಬೀಸುವ, ಕುಟ್ಟುವ, ಸೇದುವ ಸಂಸ್ಕೃತಿ ಇಲ್ಲವಾಯಿತು?
ಇದೆಯಲ್ಲಾ ಸ್ವಾಮೀ... (ಕಲ್ಲು)ಬೀಸುವ, (ಮೇಜು)ಕುಟ್ಟುವ, (ಸಿಗರೇಟ್)ಸೇದುವ ಸಂಸ್ಕೃತಿ ಹಾಗೆಯೇ ಇದೆ!

ಮಹಾವೀರ ಕಾಸಾರ, ಚನ್ನಗಿರಿ
ಭೂಮಿ ಮಧ್ಯೆ ಬಂದರೆ ಚಂದ್ರಗ್ರಹಣ, ಚಂದ್ರ ಮಧ್ಯೆ ಬಂದರೆ ಸೂರ್ಯಗ್ರಹಣ, ಅತ್ತೆ (ಮಗ-ಸೊಸೆ) ಮಧ್ಯೆ ಬಂದರೆ?
ಸೊಸೆಗೆ ತವರಿನ ಟಿಕೆಟ್ ಗ್ರಹಣ, ಮಗನಿಗೆ ವಕೀಲಗ್ರಹಣ, ಅತ್ತೆಗೆ ಪುನರಪಿ ಸೌಟುಗ್ರಹಣ!

ಮಹೇಶ್, ಕೂಜಳ್ಳಿ
ಪ್ರತಿ ಪ್ರೀತಿಯ ಕೊನೆಗೂ ಒಂದು ನೋವಿನ ಅಂತ್ಯ ಇರುತ್ತಾ?



ಹಾಗೇನಿಲ್ಲ. ಅಮ್ಮನ ಪ್ರೀತಿಗೆ ನೋವಿನ ಲವಲೇಶವೂ ಸೋಂಕದು.

ರವಿಭಟ್, ಪೀಣ್ಯ
ಮನಸ್ಸು ಬೆತ್ತಲಾಗುವುದು ಯಾವಾಗ?
ಒಬ್ಬರೇ ಕುಳಿತಿರುವಾಗ ಮನಸ್ಸಾಕ್ಷಿ ಎದ್ದು ಕುಣಿದಾಗ!

ಅಕ್ಷಯ ಜೈನ್, ಬಳ್ಳಾರಿ
ಟಿವಿಗೆ ಟಿ ಆರ್ ಪಿ ಇದ್ದಂತೆ ಪ್ರೀತಿಗೆ ಏನಿದೆ ಸಾರ್?
ಎಂಎಪಿ ಅರ್ಥಾತ್ ಮಾವನ ಆಸ್ತಿಯ ಪಟ್ಟಿ!

ಪ್ರೆಸ್ ರಾಜಾ, ದೊಡ್ಡಬಳ್ಳಾಪುರ
ಮಿಲ್ಟ್ರೀಲಿ ಶತ್ರುಗಳನ್ನು ಕೊಲ್ಲಲು ಕಣ್ಣಲ್ಲೇ ಕೊಲ್ಲೋ ಹುಡುಗಿಯರನ್ನ ನೇಮಿಸಿದರೆ ಹೇಗೆ?
ಒಳ್ಳೆಯದೇ. ಆದರೆ ಶತ್ರುಗಳಲ್ಲಿ ಮೆಳ್ಳಗಣ್ಣಿನವರಿದ್ದರೆ? ಕಣ್ಣಿಗೆ ಕಣ್ಣು ಸೇರದೆ ಪರಾಭವವಾದೀತು ಜೋಕೆ!

ಎಸ್.ಜಿ.ರಾಜಶೇಖರರೆಡ್ಡಿ, ಶಿರೇಕೊಳಂ
ವರ್ಷಾನುಗಟ್ಟಲೆಯಿಂದ ನಿಂತೇ ಇರುವ ತಿರುಪತಿಯ ತಿಮ್ಮಪ್ಪನಿಗೆ ಕಾಲು ನೋಯುವುದಿಲ್ಲವೇ?
ಸೆಕೆ ತಡೆಯಲಾರದೆ ಹೊರಗೆ ಓಡಲು ನಿಂತಿರುವನಂತೆ; ಪೂಜಾರಿಗಳ ಕಣ್ಣು ತಪ್ಪಿಸಲಾಗಿಲ್ಲ, ಪಾಪ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
ಕುಡಿಯುವ ಚಟಕ್ಕೂ, ಹೆಣ್ಣಿನ ಹಠಕ್ಕೂ ಏನು ವ್ಯತ್ಯಾಸ?
ಹೆಣ್ಣಿನ ಹಠ ಕೆಲವೊಮ್ಮೆ ಮನೆಯನ್ನು ಉಳಿಸುತ್ತದೆ.

ಜೆ.ಸುಬ್ಬನಾಯಕ, ಬೊಮ್ಮಲಾಪುರ
ಹೆಂಡ ಕುಡಿದಿದ್ದರೂ ಕೈಹಿಡಿದ ಹೆಂಡತಿಯನ್ನು ಹೊಗಳುವ ಗಂಡನನ್ನು ಏನೆನ್ನಬೇಕು?
ಛೆ! ಕಳಪೆ ಹೆಂಡ ಕುಡಿದಿದ್ದಾನೆ; ಅದಕ್ಕೇ ಅಮಲೇರಿಲ್ಲ ಎನ್ನಬೇಕು!

ಹಾಡ್ಯ ಜಯಾನಂದ, ಮೈಸೂರು
ಆಗೋದೆಲ್ಲಾ ಒಳ್ಳೆಯದಕ್ಕೇ ಅಂತಾರಲ್ಲಾ, ಭೂಕಂಪ? ಸುನಾಮಿ? 9/11? 26/11?
ಒಳ್ಳೆಯದೇ – ಸುದ್ದಿ ಮಾಧ್ಯಮಗಳಿಗೆ ಇವುಗಳೇ ದೊಡ್ಡ ಹಬ್ಬ!

ದೇಶವಳ್ಳಿ ಶಿವು, ದೇಶವಳ್ಳಿ
ಗುನುಗಾಟಕ್ಕೂ, ಗೊಣಗಾಟಕ್ಕೂ ಇರುವ ವ್ಯತ್ಯಾಸ?
ಪ್ರೇಯಸಿ ಎದುರಿಗಿದ್ದರೆ ಗುನುಗಾಟ, ಹೆಂಡತಿ ಎದುರಿಗಿದ್ದರೆ ಗೊಣಗಾಟ!

ಕೆ.ಮಲ್ಲೇಶ, ಕೊಡಸೋಗೆ
ಅಷ್ಟೊಂದು ಚಿಕ್ಕ ಹಣೆಯಲ್ಲಿ ಅಷ್ಟೊಂದು ಭವಿಷ್ಯ ಬರೆಯಲು ಹೇಗೆ ಸಾಧ್ಯ?
ಕೋಡ್ ನಂಬರ್ ಮೂಲಕ; ಉದಾ: ಕೋಡ್ 1 ಗೌಡರಂತಾಗು 2 ವೀರಪ್ಪನ್‌ನಂತಾಗು, 3 ಶ್ರೀಸಾಮಾನ್ಯನಾಗು, ಇತ್ಯಾದಿ.

## ಬಹುಮಾನಿತ ಪ್ರಶ್ನೆ

ಗಾಯತ್ರಿ ರಾಜಾಜಿನಗರ, ಬೆಂಗಳೂರು
ಚಟದಿಂದ ಚಟ್ಟಕ್ಕೆ ದಾರಿ ದೂರವಿಲ್ಲವೆಂದು ತಿಳಿದಿದ್ದರೂ ಚಟಗಳನ್ನು ಬಿಡುವುದಿಲ್ಲವೇಕೆ?
ಪಟ್ಟದಿಂದ ಪಟಕ್ಕೆ ಜಿಗಿದು ಹಾರಹಾಕಿಸಿಕೊಳ್ಳುವ ಬಯಕೆಯಂತೆ!

ಕುಬೇರಪ್ಪ ಎಂ.ವಿಭೂತಿ, ಹರಿಹರ
ಸ್ವಾರ್ಥವೇ ಸ್ವಾತಂತ್ರ್ಯ ಎನ್ನುವುದಾದರೆ ಪ್ರಜಾಪ್ರಭುತ್ವದ ಗತಿಯೇನು?
ಜಾರೇ ಯಹಾ ಸೆ ಬಚ್ಚಾ, ನೇತಾ ಹಿತೋಂಕೋ ಮಾರಾ ಹಮಾರಾ...

ರಮೇಶ್, ಹನುಮನಾಳು
ಕೈಹಿಡಿದ ಹೆಂಡತಿಗೆ ಗಂಡನ ಆಸ್ತಿಯಲ್ಲಿ ಹಕ್ಕಿದೆ; ಪ್ರೇಯಸಿಗೆ ಏಕಿಲ್ಲ?
ಏಕೆಂದರೆ ಪ್ರೇಯಸಿ ಹಿಡಿದದ್ದು ಕೈಯಲ್ಲ; ಜುಟ್ಟು!

ಮಹೇಶ್ ಹೆಗಡೆ, ಹೆಗ್ಗೆ
ಹಣ ಮಾಡದ ಒಬ್ಬನೇ ಒಬ್ಬ ಪ್ರಾಮಾಣಿಕ ರಾಜಕಾರಣಿಯ ಹೆಸರನ್ನು ಹೇಳಿರಿ ನೋಡೋಣ?
ಒಂದೇಕೆ, ಎರಡೇ ನೋಡಿರಿ – ಗುಲ್ಜಾರಿ ಲಾಲ್ ನಂದಾ, ಲಾಲ್ ಬಹದ್ದೂರ್ ಶಾಸ್ತ್ರಿ!

ಚಿಕ್ಕೋಬನಹಳ್ಳಿ ಚಾಂದ್ ಬಾಷಾ, ತುಮಕೂರು
ಭಾವನೆಗಳಿಲ್ಲದವರ ಜೊತೆ ಬದುಕುವುದಾದರೂ ಹೇಗೆ?
ಮಂತ್ರಿಯ ಪಿಎ ತರಹ!

ಜಾಕೋಬ್ ಡಿಸೋಜ, ಕುರುವಳ್ಳಿ
ರಾಜಕಾರಣಿಗಳಿಗೆ ರೆಕ್ಕೆ ಇದ್ದಿದ್ದರೆ?
ಹೆಲಿಕಾಪ್ಟರ್ ಖರ್ಚು ಉಳಿಯುತ್ತಿತ್ತು.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
ಹುಡುಗಿಯರು ಕೆಇಬಿ ಕರೆಂಟ್ ತರಹ, ಯಾವಾಗ ಷಾಕ್ ಕೊಡ್ತಾರೆ ಅಂತ ಗೊತ್ತಾಗಲ್ಲವಲ್ಲಾ; ಏಕೆ?



ಹೋಲಿಕೆಯೇ ತಪ್ಪು. ಹುಡುಗಿಯರು ಕೈಹಿಡಿದರೂ ಷಾಕ್, ಕೈ ಕೊಟ್ಟರೂ ಷಾಕ್!

■ ರಾಮ್